**ಕರ್ನಾಟಕ ಸರ್ಕಾರ**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

**ನೋವೆಲ್ ಕರೋನಾ ವೈರಸ್ (ಕೋವಿಡ್–19)**

**ಪತ್ರಿಕಾ ಪ್ರಕಟಣೆ**

**ದಿನಾಂಕ: 12.04.2020** **ಸಂಜೆಯ ವರದಿ**

ಇಲ್ಲಿಯವರೆಗೆ ಭಾರತವೂ ಸೇರಿದಂತೆ **213** ದೇಶ / ಪ್ರದೇಶಗಳನ್ನು ಬಾಧಿಸಿರುವ ಇತ್ತೀಚಿನ ನೋವೆಲ್ ಕರೋನಾ ವೈರಸ್‌ನ್ನು (ಕೋವಿಡ್–19) ಅಂತರಾಷ್ಟ್ರೀಯ ಆತಂಕದ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ (ಪಿಹೆಚ್ಐಸಿ) ಎಂದು ವಿಶ್ವ ಆರೋಗ್ಯ ಸಂಸ್ಥೆಯು ಘೋಷಿಸಿದೆ. 11ನೇ ಮಾರ್ಚ್ 2020 ರಂದು ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್–19 ವನ್ನು ಸರ್ವವ್ಯಾಪಿ ರೋಗ ಎಂದು ಘೋಷಿಸಿದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯವು ರೋಗ ತಡೆಗಟ್ಟುವ ಮುಂಜಾಗ್ರತಾ ಕ್ರಮಗಳನ್ನು ಹಾಗೂ ಎಲ್ಲಾ ರೀತಿಯ ಸರ್ವೇಕ್ಷಣೆಯನ್ನು ಮತ್ತು ಸಮೂಹ ನಿಯಂತ್ರಣ ಕಾರ್ಯತಂತ್ರಗಳನ್ನು ಬಲಪಡಿಸಿದೆ. ಅಂತರಾಷ್ಟ್ರೀಯ ಪ್ರಯಾಣ ಹಿನ್ನಲೆ ಹೊಂದಿರುವ ಎಲ್ಲರ ಸಾರ್ವತ್ರಿಕ ತಪಾಸಣೆ ಮುಂದುವರೆದಿದೆ.

**"ದಿನಾಂಕ 12.04.2020, ಸಾಯಂಕಾಲ 5.00 ಗಂಟೆಯ ವರದಿಯಂತೆ, ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಒಟ್ಟು 232 ಕೋವಿಡ್–19 ಖಚಿತಪಟ್ಟ ಪ್ರಕರಣಗಳಿರುತ್ತವೆ. ಅವುಗಳ ಪೈಕಿ 6 ಮರಣ ಮತ್ತು 54 ಜನ ಬಿಡುಗಡೆ ಹೊಂದಿರುತ್ತಾರೆ."**

- ಕೋವಿಡ್–19 ಪೀಡಿತ ಒಟ್ಟು **172** ವ್ಯಕ್ತಿಗಳಲ್ಲಿ, **168** ರೋಗಿಗಳು (ಒಬ್ಬರು ಗರ್ಭಿಣಿಯಾಗಿದ್ದು) ಗೊತ್ತುಪಡಿಸಿದ ಆಸ್ಪತ್ರೆಗಳ ಪ್ರತ್ಯೇಕ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಇವರ ಆರೋಗ್ಯವು ಸ್ಥಿರವಾಗಿರುತ್ತದೆ ಹಾಗೂ **ನಾಲ್ವರನ್ನು ಐ.ಸಿ.ಯು.ನಲ್ಲಿ** (P43, P101, P108-K & P195) ಇಡಲಾಗಿರುತ್ತದೆ.
- ದಿನಾಂಕ 11.04.2020, ಸಂಜೆ 5:00 ರಿಂದ ದಿನಾಂಕ 12.04.2020 ಸಂಜೆ 5:00 ರವರೆಗೆ ರಾಜ್ಯದಲ್ಲಿ **17** ಹೊಸ ಕೋವಿಡ್ –19 ಖಚಿತ ಪ್ರಕರಣಗಳು ಪತ್ತೆಯಾಗಿದ್ದು, ವಿವರ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಪ್ರಕರಣ ಸಂಖ್ಯೆ | ವಯಸ್ಸು | ಲಿಂಗ | ವಾಸ ಸ್ಥಳ | ಪ್ರಯಾಣದ ಹಿನ್ನಲೆ / ಸಂಪರ್ಕ | ಪ್ರತ್ಯೇಕಿಸಿದ ಆಸ್ಪತ್ರೆ |
|---|---|---|---|---|---|---|
| 1 | P216 | 32 | ಗಂಡು | ಮೈಸೂರು | P88ರ ಸಂಪರ್ಕ (ಫಾರ್ಮ ಕಂಪನಿಯ ಸಿಬ್ಬಂದಿ) | ನಿಗಧಿತ ಆಸ್ಪತ್ರೆ, ಮೈಸೂರು |
| 2 | P217 | 75 | ಹೆಣ್ಣು | ಬಿ.ಬಿ.ಎಂ.ಪಿ., ಬೆಂಗಳೂರು ನಗರ | ತೀವ್ರ ಉಸಿರಾಟದ ತೊಂದರೆ | ನಿಗಧಿತ ಆಸ್ಪತ್ರೆ, ಬೆಂಗಳೂರು ನಗರ |
| 3 | P218 | 58 | ಗಂಡು | ಬಿ.ಬಿ.ಎಂ.ಪಿ., ಬೆಂಗಳೂರು ನಗರ | ಇಂಡೋನೆಷಿಯಾಗೆ ಪ್ರಯಾಣ ಮಾಡಿದ್ದು, ದಿನಾಂಕ 21.03.2020 ರಂದು ಭಾರತಕ್ಕೆ ಹಿಂದಿರುಗಿರುತ್ತಾರೆ. | ನಿಗಧಿತ ಆಸ್ಪತ್ರೆ, ಬೆಂಗಳೂರು ನಗರ |
| 4 | P219 | 76 | ಗಂಡು | ಬಿ.ಬಿ.ಎಂ.ಪಿ., ಬೆಂಗಳೂರು ನಗರ | ತೀವ್ರ ಉಸಿರಾಟದ ತೊಂದರೆ | ಖಾಸಗಿ ಆಸ್ಪತ್ರೆ, ಬೆಂಗಳೂರು ನಗರ |
| 5 | P220 | 24 | ಹೆಣ್ಣು | ಕಲಬುರಗಿ | P77ರ ಸಂಪರ್ಕ (ಸೊಸೆ) | ನಿಗಧಿತ ಆಸ್ಪತ್ರೆ, ಕಲಬುರಗಿ |
| 6 | P221 | 60 | ಹೆಣ್ಣು | ವಿಜಯಪುರ | ತೀವ್ರ ಉಸಿರಾಟದ ತೊಂದರೆ | ನಿಗಧಿತ ಆಸ್ಪತ್ರೆ, ವಿಜಯಪುರ |
| 7 | P222 | 38 | ಹೆಣ್ಣು | ಕಲಬುರಗಿ | P177ರ ಸಂಪರ್ಕ | ನಿಗಧಿತ ಆಸ್ಪತ್ರೆ, ಕಲಬುರಗಿ |

| | | | | | | |
|---|---|---|---|---|---|---|
| 8 | P223 | 19 | ಗಂಡು | ರಾಯಬಾಗ, ಬೆಳಗಾವಿ | P150ರ ಸಂಪರ್ಕ | ನಿಗಧಿತ ಆಸ್ಪತ್ರೆ, ಬೆಳಗಾವಿ |
| 9 | P224 | 38 | ಗಂಡು | ಹಿರೇಬಾಗೆವಾಡಿ, ಬೆಳಗಾವಿ | P128ರ ಸಂಪರ್ಕ | ನಿಗಧಿತ ಆಸ್ಪತ್ರೆ, ಬೆಳಗಾವಿ |
| 10 | P225 | 55 | ಗಂಡು | ರಾಯಬಾಗ, ಬೆಳಗಾವಿ | P150ರ ಸಂಪರ್ಕ | ನಿಗಧಿತ ಆಸ್ಪತ್ರೆ, ಬೆಳಗಾವಿ |
| 11 | P226 | 25 | ಗಂಡು | ರಾಯಬಾಗ, ಬೆಳಗಾವಿ | P150ರ ಸಂಪರ್ಕ | ನಿಗಧಿತ ಆಸ್ಪತ್ರೆ, ಬೆಳಗಾವಿ |
| 12 | P227 | 2 | ಗಂಡು | ಕಲಬುರಗಿ | ತೀವ್ರ ಉಸಿರಾಟದ ತೊಂದರೆ | ನಿಗಧಿತ ಆಸ್ಪತ್ರೆ, ಕಲಬುರಗಿ |
| 13 | P228 | 13 | ಗಂಡು | ವಿಜಯಪುರ | ಸಂಪರ್ಕ ಪತ್ತೆಹಚ್ಚುವಿಕೆ ಪ್ರಗತಿಯಲ್ಲಿದೆ | ನಿಗಧಿತ ಆಸ್ಪತ್ರೆ, ವಿಜಯಪುರ |
| 14 | P229 | 12 | ಹೆಣ್ಣು | ವಿಜಯಪುರ | ಸಂಪರ್ಕ ಪತ್ತೆಹಚ್ಚುವಿಕೆ ಪ್ರಗತಿಯಲ್ಲಿದೆ | ನಿಗಧಿತ ಆಸ್ಪತ್ರೆ, ವಿಜಯಪುರ |
| 15 | P230 | 10 | ಗಂಡು | ವಿಜಯಪುರ | ಸಂಪರ್ಕ ಪತ್ತೆಹಚ್ಚುವಿಕೆ ಪ್ರಗತಿಯಲ್ಲಿದೆ | ನಿಗಧಿತ ಆಸ್ಪತ್ರೆ, ವಿಜಯಪುರ |
| 16 | P231 | 49 | ಗಂಡು | ವಿಜಯಪುರ | ಸಂಪರ್ಕ ಪತ್ತೆಹಚ್ಚುವಿಕೆ ಪ್ರಗತಿಯಲ್ಲಿದೆ | ನಿಗಧಿತ ಆಸ್ಪತ್ರೆ, ವಿಜಯಪುರ |
| 17 | P232 | 20 | ಹೆಣ್ಣು | ವಿಜಯಪುರ | ಸಂಪರ್ಕ ಪತ್ತೆಹಚ್ಚುವಿಕೆ ಪ್ರಗತಿಯಲ್ಲಿದೆ | ನಿಗಧಿತ ಆಸ್ಪತ್ರೆ, ವಿಜಯಪುರ |

**ಕೋವಿಡ್–19 ಜಿಲ್ಲಾವಾರು ಸಂಕ್ಷಿಪ್ತ ವರದಿ**

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಸೋಂಕಿತರು | ಬಿಡುಗಡೆಯಾದವರ ಸಂಖ್ಯೆ | ಸಕ್ರಿಯ ಪ್ರಕರಣಗಳು | ಮರಣ ಹೊಂದಿದವರ ಸಂಖ್ಯೆ |
|---|---|---|---|---|---|
| 1 | Bengaluru Urban | 76 | 23 | 52 | 1 |
| 2 | Mysuru | 48 | 9 | 39 | 0 |
| 3 | Dakshina Kannada | 12 | 6 | 6 | 0 |
| 4 | Uttara Kannada | 9 | 2 | 7 | 0 |
| 5 | Chikkaballapura | 9 | 6 | 3 | 0 |
| 6 | Kalaburgi | 13 | 2 | 9 | 2 |
| 7 | Ballari | 6 | 0 | 6 | 0 |
| 8 | Davanagere | 3 | 3 | 0 | 0 |
| 9 | Udupi | 3 | 1 | 2 | 0 |
| 10 | Dharwad | 2 | 1 | 1 | 0 |
| 11 | Kodagu | 1 | 1 | 0 | 0 |
| 12 | Tumakuru | 1 | 0 | 0 | 1 |
| 13 | Bidar | 11 | 0 | 11 | 0 |
| 14 | Bagalakote | 8 | 0 | 7 | 1 |
| 15 | Belagavi | 14 | 0 | 14 | 0 |
| 16 | Bengaluru Rural | 4 | 0 | 4 | 0 |
| 17 | Gadag | 1 | 0 | 0 | 1 |
| 18 | Mandya | 5 | 0 | 5 | 0 |
| 19 | Vijayapura | 6 | 0 | 6 | 0 |
| ಒಟ್ಟು | | **232** | **54*** | **172** | **6** |

*ಆಸ್ಪತ್ರೆಯಿಂದ ಬಿಡುಗಡೆಯಾದವರ ಸಂಖ್ಯೆ – *P1, P2, P3, P4, P5, P7, P8, P9, P10, P11, P12, P13, P14, P15, P16, P20, P21, P22, P23, P24, P25, P26, P27-K, P28, P29, P31, P33-K, P34-K, P35, P36, P37, P39-K, P41-K, P42, P47, P48, P51, P52, P56, P63, P64, P68, P69, P70, P71, P72, P73, P75, P78, P79, P81, P85, P86, & P88*

ಮರಣ – **P6, P53, P60, P125, P166 & P177**

ಎಲ್ಲಾ ಕೋವಿಡ್–19 ಸೋಂಕಿತ ವ್ಯಕ್ತಿಗಳ ಸಂಪರ್ಕದಲ್ಲಿರುವವರನ್ನು ಪತ್ತೆ ಹಚ್ಚುವ ಕಾರ್ಯ ಜಾರಿಯಲ್ಲಿರುತ್ತದೆ.

**ಸೂಚನೆ:** ಕರ್ನಾಟಕದಲ್ಲಿ ಪತ್ತೆ ಮಾಡಲಾಗಿರುವ **232** ಪ್ರಕರಣಗಳಲ್ಲಿ **9** ಪ್ರಕರಣಗಳು ಕೇರಳದವರಾಗಿರುತ್ತಾರೆ. ಅವರು ಕರ್ನಾಟಕದ ವಿಮಾನ ನಿಲ್ದಾಣಗಳ ಮೂಲಕ ಕೇರಳಕ್ಕೆ ಪ್ರಯಾಣಿಸುತ್ತಿರುವಾಗ ಪತ್ತೆ ಮಾಡಿ, ಅವರಿಗೆ ಕರ್ನಾಟಕದಲ್ಲೇ ಚಿಕಿತ್ಸೆ ನೀಡಲಾಗುತ್ತಿದೆ.

| ABSTRACT | | | |
|---|---|---|---|
| | **ಚಟುವಟಿಕೆಗಳು** | **ಒಟ್ಟು** | |
| | | **ಇಂದಿನ** | **ಸಂಚಿತ** |
| **A** | ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ತಪಾಸಣೆಗೊಳಪಟ್ಟ ಒಟ್ಟು ಪ್ರಯಾಣಿಕರು | 24* | 139792 |
| **B** | ನಿಗಾವಣೆಯಲ್ಲಿರುವ ಒಟ್ಟು ಅಂತರರಾಷ್ಟ್ರೀಯ ಪ್ರಯಾಣಿಕರು<br>• ಮನೆ ಕ್ವಾರನ್‌ಟೈನ್ ರಡಿ<br>• ವರದಿ ಸಂಪರ್ಕ ಸಮಯದಲ್ಲಿ | 0**<br>9770 | |
| **C** | ನಿಗಾವಣೆಯಲ್ಲಿರುವ ಒಟ್ಟು ಸಂಪರ್ಕ ವ್ಯಕ್ತಿಗಳು<br>ಪ್ರಥಮ<br>ದ್ವಿತೀಯ | 2314<br>7574 | |
| **D** | **ನಿಗಾವಣೆಯಲ್ಲಿರುವ ಒಟ್ಟು ವ್ಯಕ್ತಿಗಳು** | **19658** | |
| **E** | ಆರೋಗ್ಯ ಕೇಂದ್ರಗಳಲ್ಲಿನ ಒಟ್ಟು ಪ್ರತ್ಯೇಕಿತ ವ್ಯಕ್ತಿಗಳು | 131 | 614 |
| **F** | ಪರೀಕ್ಷಣೆಗಾಗಿ ಪಡೆದ ಒಟ್ಟು ಮಾದರಿಗಳು | 691 | 9251 |
| **G** | ನೆಗೆಟಿವ್ ವರದಿಯಾದ ಒಟ್ಟು ಮಾದರಿಗಳು | 600 | 8831 |
| | **ಕೋವಿಡ್–19 ಖಚಿತವಾದ (ಪಾಸಿಟಿವ್) ಒಟ್ಟು ಮಾದರಿಗಳು** | **17** | **232** |

* ಮಂಗಳೂರು ಬಂದರು

** ಎಲ್ಲಾ ಅಂತರ ರಾಷ್ಟ್ರೀಯ ಪ್ರಯಾಣಿಕರು ಗಳ ಮನೆ ಕ್ವಾರನ್‌ಟೈನ್ ಅವಧಿಯು ಪೂರ್ಣಗೊಂಡಿರುತ್ತದೆ.

**ನಿಗದಿತ ಆಸ್ಪತ್ರೆಗಳಲ್ಲಿ ಶಂಕಿತ ವ್ಯಕ್ತಿಗಳನ್ನು ಪ್ರತ್ಯೇಕವಾಗಿರಿಸಲ್ಪಟ್ಟವರ ವಿವರ**

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಇಂದಿನ ಹೊಸ ದಾಖಲಾತಿ | ಇಂದಿನ ಒಟ್ಟು ಬಿಡುಗಡೆ | ಒಟ್ಟು ಪ್ರತ್ಯೇಕಗೊಳಿಸಲಾಗಿರುವವರು |
|---|---|---|---|---|
| 1 | Bengaluru Urban (Identified Hospitals) | 11 | 2 | 66 |
| 2 | Bidar | 1 | 0 | 65 |
| 3 | Kalaburagi | 6 | 9 | 57 |
| 4 | Mysuru | 1 | 0 | 46 |
| 5 | Vijayapur | 18 | 3 | 45 |
| 6 | Udupi | 6 | 0 | 44 |
| 7 | Tumakuru | 14 | 2 | 41 |
| 8 | Bagalkote | 11 | 10 | 38 |
| 9 | BBMP | 2 | 0 | 29 |
| 10 | Dakshina Kannada | 5 | 23 | 24 |
| 11 | Bengaluru rural | 1 | 0 | 20 |
| 12 | Gadag | 4 | 0 | 19 |
| 13 | Utatara Kannada | 0 | 3 | 16 |
| 14 | Bengaluru (RGICD) | 9 | 4 | 12 |
| 15 | Dharwad | 3 | 0 | 11 |
| 16 | Belagavi | 0 | 0 | 10 |
| 17 | Ramanagar | 10 | 6 | 10 |
| 18 | Kodagu | 6 | 5 | 9 |
| 19 | Ballari | 0 | 0 | 8 |
| 20 | Shivamogga | 8 | 2 | 8 |

| | | | | |
|---|---|---|---|---|
| 21 | Yadgiri | 8 | 0 | 8 |
| 22 | Davangere | 2 | 5 | 5 |
| 23 | Hassan | 5 | 7 | 5 |
| 24 | Kolar | 0 | 3 | 5 |
| 25 | Mandya | 0 | 0 | 5 |
| 26 | Chikkaballpur | 0 | 4 | 4 |
| 27 | Haveri | 0 | 0 | 2 |
| 28 | Chitradurga | 0 | 0 | 1 |
| 29 | Koppal | 0 | 0 | 1 |
| **Total** | | 131 | 88 | 614 |

## ಇಂದಿನ ವಿಷಯಗಳು

| | |
|---|---|
| 1 | ಕೋವಿಡ್–19 ಮರಣ ದರವನ್ನು ನಿಯಂತ್ರಣಗೊಳಿಸುವ ನಿಟ್ಟಿನಡಿ, ಸೋಂಕಿತ, ವೃದ್ಧ ಮತ್ತು ಇತರೆ ಅಸ್ವಸ್ಥತೆ (co-morbidities) ಯುಳ್ಳ ಹಾಗೂ ಕುಂಠಿತ ರೋಗ ನಿರೋಧಕ ಶಕ್ತಿಯುಳ್ಳ ವ್ಯಕ್ತಿಗಳಿಗೆ ಉನ್ನತ ವೈದ್ಯಕೀಯ ಆರೈಕೆಯನ್ನು ಸೂಕ್ತ ಸಮಯದಲ್ಲಿ ಒದಗಿಸುವ ಅವಶ್ಯಕತೆ ಇರುತ್ತದೆ. ಈ ಹಿನ್ನಲೆಯಲ್ಲಿ ರಾಜ್ಯ ಮಟ್ಟದಲ್ಲಿ ಒಂದು Critical Care Support (CCS) ತಂಡವನ್ನು ರಚಿಸಲಾಗಿರುತ್ತದೆ. ಸದರಿ ತಂಡವು, ಕೋವಿಡ್–19 ಚಿಕಿತ್ಸೆ ನೀಡುತ್ತಿರುವ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಯ ತಜ್ಞ ವೈದ್ಯರುಗಳಿಗೆ ಸಲಹೆಗಳನ್ನು ನೀಡುತ್ತದೆ. ರಾಜ್ಯ ಸರ್ಕಾರವು ಸದರಿ ತಂಡದ ನೇತೃತ್ವಕ್ಕೆ ಡಾ. ಕೆ.ವಿ. ತ್ರಿಲೋಕ್ ಐ.ಎ.ಎಸ್. ರವರನ್ನು ವಿಶೇಷ ಅಧಿಕಾರಿಯನ್ನಾಗಿ ನೇಮಿಸಿದೆ. |
| 2 | ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ 31 ಜ್ವರ ಚಿಕಿತ್ಸಾಲಯದಲ್ಲಿ ದಿನಾಂಕ 11.04.2020 ರಂದು ಒಟ್ಟು **191** ವ್ಯಕ್ತಿಗಳನ್ನು ತಪಾಸಣೆ ಮಾಡಲಾಗಿದೆ. ಈವರೆಗೂ ಒಟ್ಟಾರೆ **3131** ವ್ಯಕ್ತಿಗಳಿಗೆ ತಪಾಸಣೆ ನಡೆಸಲಾಗಿದೆ. |
| 3 | **Home Quarantine Enforcement Squad** ತಂಡದವರು, ಸಾರ್ವಜನಿಕರಿಂದ ಪಡೆದ ದೂರುಗಳ ಮೇರೆಗೆ ದಿನಾಂಕ 11.04.2020 ರಂದು ಒಟ್ಟು **7** ವ್ಯಕ್ತಿಗಳನ್ನು ಸಂಸ್ಥೆಗಳಲ್ಲಿ ಕ್ವಾರಂಟೈನ್ ಮಾಡಿರುತ್ತಾರೆ. ಇದೂವರೆವಿಗೂ ಒಟ್ಟಾರೆಯಾಗಿ **462** ವ್ಯಕ್ತಿಗಳನ್ನು ಮನೆ ಕ್ವಾರಂಟೈನ್‌ನಿಂದ ನಿಗಧಿತ ಸಂಸ್ಥೆಗಳಲ್ಲಿ ಕ್ವಾರನ್‌ಟೈನ್‌ಗೆ ವರ್ಗಾವಣೆ ಮಾಡಿರುತ್ತಾರೆ. |
| 4 | ನಿಯೋಜಿತ ಆಸ್ಪತ್ರೆಗಳಲ್ಲಿ ದಾಖಲಾಗಿರುವ ಕೋವಿಡ್–19 ಪಾಸಿಟಿವ್ ಪ್ರಕರಣಗಳು ಮತ್ತು ಶಂಕಿತರು ಕನಿಷ್ಠ 14 ದಿನಗಳ ಕಾಲ ಅಥವಾ ಪಾಸಿಟಿವ್ ಪ್ರಕರಣದ ಸರಣಿ ಮಾದರಿಗಳು ನೆಗೆಟಿವ್ ಎಂದು ಸಾಬೀತಾಗುವ ತನಕ ಅಥವಾ ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರ ಸಲಹೆ ಸಿಗುವ ತನಕ ಸಂಬಂಧಪಟ್ಟ ವ್ಯಕ್ತಿಗಳನ್ನು ಬಿಡುಗಡೆ ಮಾಡಲಾಗುವುದಿಲ್ಲ. ಪ್ರತ್ಯೇಕ ವ್ಯವಸ್ಥೆಯಲ್ಲಿ ಇಷ್ಟೊಂದು ಸುದೀರ್ಘ ಕಾಲ ಸಂಯಮದಿಂದ ಇರಲು ಮಾನಸಿಕ ಸ್ಥೈರ್ಯದ ಅಗತ್ಯವಿರುತ್ತದೆ. **ಈ ಅಗತ್ಯವನ್ನು ಮನಗಂಡು ಇಲಾಖೆಯು ಅಂತಹ ರೋಗಿಗಳಿಗೆ ಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಸದರಿಯವರಿಗೆ** ಮಾನಸಿಕ ಆರೋಗ್ಯದ **ಸಂಪರ್ಕಿತ ಆಪ್ತ ಸಮಾಲೋಚನೆ ಸೇವೆಗಳನ್ನು ಕಲ್ಪಿಸುತ್ತಿದೆ. ಅದರಂತೆ,** ದಿನಾಂಕ 11.**04.2020** ರಂದು ಒಟ್ಟು **1,421** ಸಂಖ್ಯೆಯ ಮತ್ತು ಇಲ್ಲಿಯವರೆಗೂ ಒಟ್ಟಾರೆಯಾಗಿ **32,946** ಸಂಖ್ಯೆಯ ಸಂಪರ್ಕಿತ ಆಪ್ತ ಸಮಾಲೋಚನೆ ಸೇವೆಗಳನ್ನು ನೀಡಲಾಗಿರುತ್ತದೆ. |
| 5 | ನಿಜಾಮುದ್ದೀನ್ ಮರ್ಕಜ್ ಮಸೀದಿ, ನವ ದೆಹಲಿಯಲ್ಲಿ ಜರುಗಿದ **ತಬ್ಲಿಘಿ ಝಮಾತ್ ಧರ್ಮಸಭೆಯಲ್ಲಿ** ಭಾಗವಹಿಸಿದ ಪ್ರತಿಯೊಬ್ಬರು ಸಹ ಕಡ್ಡಾಯವಾಗಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಚಿತ ಆರೋಗ್ಯ ಸಹಾಯವಾಣಿ **080–29711171**ಕ್ಕೆ ಕರೆ ಮಾಡಿ ಸಂಪರ್ಕಿಸುವುದು. |
| 6 | ಮಾನ್ಯ ಮುಖ್ಯ ಮಂತ್ರಿಗಳು ಕೋವಿಡ್–19 ನಿಯಂತ್ರಣಕ್ಕೆ ಸ್ವಇಚ್ಛೆಯಿಂದ ಟೆಲಿಮೆಡಿಸನ್ ಮುಖಾಂತರ ಸೇವೆ ಸಲ್ಲಿಸಲು ಬಯಸುವ **ವೈದ್ಯರಿಗೆ ದೂರವಾಣಿ ಸಂಖ್ಯೆ 080–47192219** ಗೆ ಮಿಸ್ಡ್ ಕಾಲ್ ನೀಡಲು ಅಥವಾ**https://forms.gle/TPbU7eZgazdxG9gS9**ನಲ್ಲಿ ಸೈನ್ ಅಪ್ ಮಾಡಿಕೊಂಡು ಸರ್ಕಾರಕ್ಕೆ ಸಹಾಯ ಮಾಡಲು ಮನವಿ ಮಾಡಿಕೊಂಡಿರುತ್ತಾರೆ. |
| 7 | ಕರೋನಾ ನಿಗಾವಣೆ / ಮೊಬೈಲ್ ಅಪ್ಲಿಕೇಷನ್ನು **www.karnataka.gov.in** ಈ ಮೂಲಕ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಅಪ್ಲಿಕೇಷನ್‌ನಲ್ಲಿ ಕೋವಿಡ್–19 ರೋಗಿಯು ಪ್ರಯೋಗಶಾಲಾ ಫಲಿತಾಂಶಕ್ಕೆ ಮೊದಲು 14 ದಿವಸ ಪ್ರಯಾಣ ಮಾಡಿದ ವಿವಿಧ ಸ್ಥಳ / ಪ್ರದೇಶಗಳ ಮಾಹಿತಿ ಲಭ್ಯವಿರುತ್ತದೆ. ಅದರ ಜೊತೆಗೆ ಫಸ್ಟ್ ರೆಸ್‌ಪಾಂಡರ್ ಆಸ್ಪತ್ರೆಗಳ ಮಾಹಿತಿ ಹಾಗೂ ಸಹಾಯವಾಣಿಗಳ ಸಂಖ್ಯೆ ಲಭ್ಯವಿರುತ್ತದೆ. |
| 8 | ಕೋವಿಡ್–19 ಸಂಬಂಧಿತ ಎಲ್ಲಾ ರೀತಿಯ ಹೆಚ್ಚಿನ ಮಾಹಿತಿಗಾಗಿ ಉಚಿತ ಆರೋಗ್ಯ ಸಹಾಯವಾಣಿ ಸಂಖ್ಯೆ **104** ರನ್ನು ಮತ್ತು ಹೊಸ ಸಂಖ್ಯೆ **9745697456** ರನ್ನು ಸಂಪರ್ಕಿಸಬಹುದಾಗಿದೆ. |

104 ಆರೋಗ್ಯ ಸಹಾಯವಾಣಿ (ಶುಲ್ಕರಹಿತ ಕಾಲ್ ಸೆಂಟರ್) ಕೋವಿಡ್–19 ಕುರಿತ ಕರೆಗಳಿಗಾಗಿ 210 ಆಸನಗಳನ್ನು ಮೀಸಲಿರಿಸಿದೆ. ದಿನಾಂಕ 11.**04.2020** ರಂದು **4,490** ಕರೆಗಳನ್ನು ಸ್ವೀಕರಿಸಲಾಗಿದೆ ಮತ್ತು **8** ಅಗತ್ಯ ಮಾರ್ಗದರ್ಶನ ನೀಡುವ ಕರೆಗಳನ್ನು ಸೇರಿ ಒಟ್ಟು **9,191** ಹೊರ ಕರೆಗಳನ್ನು ಮಾಡಲಾಗಿದೆ.

**ಸಾರ್ವಜನಿಕರಿಗೆ ಮನವಿ:** ಕೋವಿಡ್–19 ಪೀಡಿತ ದೇಶಗಳಿಂದ ಹಿಂತಿರುಗಿರುವ ಅಥವಾ ಸೋಂಕಿತ ವ್ಯಕ್ತಿಯ ಸಂಪರ್ಕದಲ್ಲಿರುವ ಯಾರಾದರೂ ಭಾರತಕ್ಕೆ ಹಿಂತಿರುಗಿದ ದಿನದಿಂದ 14 ದಿನಗಳವರೆಗೆ, ರೋಗ ಲಕ್ಷಣಗಳು ಇರಲಿ ಅಥವಾ ಇಲ್ಲದಿರಲಿ ಮನೆಯಲ್ಲಿ ಪ್ರತ್ಯೇಕವಾಗಿರುವುದು ಹಾಗೂ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ವರದಿ ಮಾಡಿಕೊಳ್ಳುವುದು ಅಥವಾ 104 ಉಚಿತ ಆರೋಗ್ಯ ಸಹಾಯವಾಣಿಗೆ ಕರೆ ಮಾಡುವುದು. ವೈಯಕ್ತಿಕ ಸ್ವಚ್ಚತೆಯನ್ನು ಕಾಪಾಡಿಕೊಳ್ಳಿ. ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರ / ಟಿಶ್ಯೂ ಪೇಪರನ್ನು ಬಳಸಿ, ಕೈ ಸ್ವಚ್ಛಗೊಳಿಸುವ ದ್ರಾವಣ (ಸ್ಯಾನಿಟೈಸರ್) ಅಥವಾ ನೀರು ಮತ್ತು ಸೋಪು ಬಳಸಿ ಆಗಾಗ ಕೈಗಳನ್ನು ತೊಳೆದುಕೊಳ್ಳಿ ಮತ್ತು ಸಾಮಾಜಿಕ ಸಮೂಹ ಗುಂಪು ಸೇರುವಿಕೆಯನ್ನು ಮಾಡಬೇಡಿ.

***ನಿಮಗೆ ಸಹಾಯ ಮಾಡಲು ನಮಗೆ ನೆರವು ನೀಡಿ***
***ನಾವೆಲ್ಲರೂ ಒಟ್ಟಾಗಿ ಕೋವಿಡ್–19 ವಿರುದ್ಧ ಹೋರಾಡೋಣ***
**ಉಚಿತ ಆರೋಗ್ಯ ಸಹಾಯವಾಣಿ ಸಂಖ್ಯೆ 104ಕ್ಕೆ ಹಾಗೂ**
**9745697456, 080–46848600, 080–66692000 ಕ್ಕೆ ಕರೆಮಾಡಿ**

ಎಲ್ಲ ರೀತಿಯ ಮಾರ್ಗಸೂಚಿಗಳು ಮತ್ತು ಸಲಹೆಗಳು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಾಲತಾಣದಲ್ಲಿ ಲಭ್ಯವಿದೆ: **https://karunadu.karnataka.gov.in/hfw/kannada/Pages/covid-19.aspx**

***********